# ಅಪ್ಪ ಅಂದರೆ ಅವರಿಗಿಷ್ಟ

‘ಒಂದೂರಲ್ಲಿ ಒಬ್ಬ ಅಪ್ಪ. ಅವರಿಗೆ ಮನುಷ್ಯರನ್ನು ಕಂಡರೆ ಪ್ರೀತಿ. ಊಟದ ಹೊತ್ತಿಗೆ ಯಾರು ಬಂದರೂ ಕೈಕಾಲು ತೊಳೆದುಕೊಂಡು ಸಹಭೋಜನ ಮಾಡಿಯೇ ಹೋಗಬೇಕು; ಅಂಥ ಒತ್ತಾಯ. ಹಬ್ಬವೆಂದರೆ ಮುಖ ಮೊರದಗಲ. ಅಪ್ಪ ಯೋಗ ಮಾಡುವುದನ್ನು ನೋಡುವುದೇ ಚೆಂದ. ಆಡುವ ಮಾತು ಕೇಳುವುದೂ ಚೆಂದ. ಹಾಡಿದರಂತೂ ಹಬ್ಬ. ಹಸಿದು ಬಂದವರಿಗೆ ಒಂದು ತುತ್ತು ಊಟ ಹಾಕಬೇಕು ಕಂದಾ... ಎಂದು ಅವರು ಹೇಳುತ್ತಲೇ ಇದ್ದರು...’

ಮೇರುನಟನ ಎರಡನೇ ಮಗ ಹೀಗೆ; ಅಪ್ಪನ ಹಾಗೆಯೇ ಕಥೆ ಹೇಳುತ್ತಿದ್ದರು. ಅವರ ಕಥೆಗಳಲ್ಲಿ ಅಪ್ಪನೇ ನಾಯಕ. ಅಪ್ಪ ಮೃತಪಟ್ಟ ಮೇಲೂ ಅವರ ನೆನಪುಗಳನ್ನು ಹೀಗೆ ಆಗೀಗ ಹೇಳಿಕೊಳ್ಳುತ್ತಲೇ ಹಗುರವಾಗುತ್ತಿದ್ದರು. ಆಗೀಗ ಕಣ್ಣಂಚಿನಲ್ಲಿ ಹನಿ ಜಿನುಗಿದ್ದೇ ಒರೆಸಿಕೊಂಡು ಬಿಡುತ್ತಿದ್ದರು. ತಮ್ಮ ಮಗ ನಾಯಕನಾದಾಗ ನೋಡಲು ಅವರ ತಾತ ಇಲ್ಲವಲ್ಲ ಎಂಬ ಬೇಸರ.

ಈ ಎರಡನೇ ಮಗ ಒಂದು ಕಾಲದಲ್ಲಿ ಯಶಸ್ವಿ ನಾಯಕ. ಮೊದಲ ಮೂರು ಸಿನಿಮಾಗಳಲ್ಲಿ ಎರಡಂತೂ ವರ್ಷ ಕಾಲ ಓಡಿದ್ದವು. ‘ಕನಸಿನ ಕನ್ಯೆ’ ಗುಣವಿಶೇಷಣದ ನಾಯಕಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದ ಕಾಲಘಟ್ಟವೂ ಅದೇ. ಈ ನಟ ತಂದೆಯನ್ನು ಅನುಕರಿಸಲು ಹೋದ ಸಂದರ್ಭಗಳಿಗೆ ಲೆಕ್ಕವಿಲ್ಲ. ಆದರೆ, ‘ಅವರೆಲ್ಲಿ ನಾನೆಲ್ಲಿ’ ಎಂಬ ವಿನಯವನ್ನಂತೂ ಸದಾ ಉಳಿಸಿಕೊಂಡರು.

ಅಪ್ಪನಷ್ಟು ಸಲೀಸಾಗಿ ಅಲ್ಲದಿದ್ದರೂ ಸಂಗೀತದ ಮೂಲತತ್ತ್ವಕ್ಕೆ ಚ್ಯುತಿಯಾಗದಂತೆ ಹಾಡಬಲ್ಲ ನಾಯಕ ಎನಿಸಿಕೊಂಡರು. ಹೀಗೆ ಬೆಳೆಯುವ ಲಕ್ಷಣಗಳನ್ನು ತೋರಿದ್ದ ನಟನ ಗ್ರಾಫ್ ದಿಢೀರನೆ ಕುಸಿಯಿತು. ವಿಲಕ್ಷಣ ಹೆಸರಿನ ಚಿತ್ರದ ವಿಚಿತ್ರ ಹಾಡುಗಳು ಹಾಗೂ ಮ್ಯಾನರಿಸಂ ಸಿನಿಮಾ ಕೆರಿಯರ್‌ಗೆ ಕೊಡಲಿ ಏಟು ಕೊಟ್ಟಿತು. ದಿಗ್ಗಜ ನಿರ್ದೇಶಕ ಆ್ಯಕ್ಷನ್–ಕಟ್ ಹೇಳಿದ್ದರೂ ಸಿನಿಮಾಗೆ ಅಂಥ ಗತಿ ಯಾಕೆ ಒದಗಿತೋ ಎಂದು ದೊಡ್ಡ ಮಟ್ಟದ ವಿಮರ್ಶೆಯೂ ನಡೆಯಿತೆನ್ನಿ.

ನಟ ತನ್ನ ತಂದೆಯನ್ನು ಕಳೆದುಕೊಂಡ ಮೇಲೆ ಸಾಕಷ್ಟು ಮೆತ್ತಗಾದರು. ಈ ಮಗನ ದುಃಖ ಕಂಡು ಗಟ್ಟಿಗಿತ್ತಿ ಅಮ್ಮ ಕೂಡ ಬಿಕ್ಕಿದರು. ‘ನನ್ನ ಎರಡನೇ ಮಗನ ಕೆರಿಯರ್‌ನ್ನು ಮುಗಿಸಿದ್ದೇ ಆ ನಿರ್ದೇಶಕ. ಯಾವ ನಿರ್ದೇಶಕನಿಗೆ ತಾನು ನಾಯಕ ಆಗಬೇಕು ಎಂಬ ಹೆಬ್ಬಯಕೆ ಇರುವುದೋ ಅವನು ಸ್ಥಾನ ಭದ್ರ ಮಾಡಿಕೊಂಡ ನಾಯಕರನ್ನೆಲ್ಲ ಹೀಗೇ ಮುಗಿಸಿಬಿಡುತ್ತಾನೆ’ ಎಂದು ಆ ತಾಯಿ ದೂರಿದರು. ‘ಓಂ’ ಎನ್ನುತ್ತಾ ಸುಮ್ಮನೆ ಕೂರುವ ನಿರ್ದೇಶಕ ಅವರಾಗಿರಲಿಲ್ಲ. ‘ಅಮ್ಮ ಯಾಕೆ ಹೀಗೆ ಸ್ಟೇಟ್‌ಮೆಂಟು ಕೊಟ್ಟಿದ್ದಾರೆ’ ಎಂದು ಅವರು ಮೇರುನಟನ ಮಕ್ಕಳನ್ನೆಲ್ಲ ಕೇಳಿದ್ದಿದೆ.

ಸಲೀಸಾಗಿ ಪಲ್ಟಿ ಹೊಡೆಯುತ್ತಿದ್ದ, ರಾಘವೇಂದ್ರರ ವರಪ್ರಸಾದ ಎಂದೇ ಮನೆಯವರು ಭಾವಿಸಿದ್ದ ನಾಯಕ ಈಗ ನೋಡಲು ಪೇಲವ. ಆರೋಗ್ಯ ಕೆಲವು ಸಲ ಕೈಕೊಟ್ಟಿದೆ. ಆದರೂ ಆತ್ಮಬಲ ನೆಚ್ಚಿಕೊಂಡೇ ಮಾತನಾಡುತ್ತಾರೆ; ಅಪ್ಪ ಅಮ್ಮನ ಸ್ಮರಣೆಯನ್ನೂ ಮಾಡುತ್ತಾರೆ.

**• ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68